ಉತ್ಪಾದನೆಗೆ ಅವಕಾಶ ಕಲ್ಪಿಸಿ ಪಿಕ್‌ಅಪ್ ಡ್ಯಾಂ ನಿರ್ಮಾಣ ಮಾಡಬೇಕೇ ಎಂಬ ಬಗ್ಗೆ ಸರ್ಕಾರದ ಉನ್ನತ ಮಟ್ಟದಲ್ಲಿ ಚರ್ಚಿಸಿ, ಮುಳುಗಡೆಗೆ ಒಳಪಡುವ ರಕ್ಷಿತ ಅರಣ್ಯ ಪ್ರದೇಶದ ಬಿಡುಗಡೆ ಕುರಿತು ಕೇಂದ್ರ ಅರಣ್ಯ ಮತ್ತು ಪರಿಯಾವರಣ ಇಲಾಖೆಯ ಅಭಿಪ್ರಾಯ ಪಡೆಯಲು 1980 ರಿಂದ 2001 ರವರೆಗೆ ಕಾಲ ವ್ಯಯವಾಗಿರುವ ಕಾರಣ ಯೋಜನೆಯ ಅನುಷ್ಠಾನ ವಿಳಂಬವಾಗಿದೆ. ಈ ವಿಚಾರವು ಸರ್ಕಾರದ ಪಾಲಿಸಿ ವಿಷಯವಾಗಿದ್ದು ಇದಕ್ಕೆ ಯಾವುದೇ ಅಧಿಕಾರಿಗಳು ಕಾರಣರಲ್ಲ. ವಾರಾಹಿ ನೀರಾವರಿ ಯೋಜನೆಗಾಗಿ ಜೂನ್ 2003 ರ ಅಂತ್ಯದವರೆಗೆ ರೂ. 3426.61 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ಪೈಕಿ ಸಿಬ್ಬಂದಿ ವೆಚ್ಚ ರೂ. 569.45 ಲಕ್ಷಗಳು ಹಾಗೂ ಕಾಮಕಾರಿ ವೆಚ್ಚ ರೂ. 2857.16 ಲಕ್ಷಗಳಾಗಿರುತ್ತದೆ.

ಇ) ಯೋಜನೆಯ ತ್ವರಿತ ಅನುಷ್ಠಾನಕ್ಕಾಗಿ ಡೈವರಶ್‌ನ್ ವಿಯರ್ ನಿರ್ಮಾರ್ಣ, ವಾರಾಹಿ ಬಲದಂಡೆ ಕಾಲುವೆ 78 ಕಿ.ಮಿ.ಉದ್ದ ಎಡದಂಡೆ ನಾಲೆ 44 ಕಿ.ಮಿ.ಉದ್ದ ಮತ್ತು 33 ಕಿ.ಮಿ. ಉದ್ದದ ಏತ ನೀರಾವರಿ ಕಾಲುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯನ್ನು ಡಿಸೆಂಬರ್ 2005 ರ ಅಂತ್ಯಕ್ಕೆ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ. ಈ ಯೋಜನೆಗೆ ಇನ್ನೂ ಸುಮಾರು ರೂ. 24073.39 ಲಕ್ಷಗಳ ಅವಶ್ಯಕತೆ ಇರುತ್ತದೆ.

ಈ) ಈ ಯೋಜನೆಯು ನಿಗದಿತ ಅವಧಿಯಲ್ಲಿ ಮುಕ್ತಾಯವಾಗದೇ ಇದ್ದಲ್ಲಿ ವರ್ಷಾವಧಿ ದರಗಳ ಹೆಚ್ಚಳದಿಂದ ಯೋಜನಾ ವೆಚ್ಚ ಅಧಿಕವಾಗುತ್ತದೆ. ಈ ಯೋಜನೆಯ ವಿಳಂಬಕ್ಕೆ ಕಾರಣ ಈ ಕೆಳಕಂಡಂತೆ ಇರುತ್ತದೆ.

1) ಅನುದಾನ ಕೊರತೆ.

2) ಕೇಂದ್ರ ಅರಣ್ಯ ಮತ್ತು ಪರಿಯಾವರಣ ಇಲಾಖೆ, ನವದೆಹಲಿ ಇವರಿಂದ ಅಂತಿಮವಾಗಿ ಬಿಡುಗಡೆಯಾಗಬೇಕಾದ 129.60 ಹೆಕ್ಟೇರ್ ರಕ್ಷಿತ ಅರಣ್ಯ ಪ್ರದೇಶದ ಬಿಡುಗಡೆಯಲ್ಲಿ ಉಂಟಾಗಿರುವ ವಿಳಂಬ.

3) ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬ

4) ಪರಿಸರ ಇಲಾಖೆಯಿಂದ ಅನುಮತಿ ಪಡೆಯಲು ಆಗಿರುವ ವಿಳಂಬ ಇತ್ಯಾದಿ

ತುಮಕೂರು ಜಿಲ್ಲೆಯ ಸ್ತ್ರೀ ಶಕ್ತಿ ಗುಂಪುಗಳಿಗೆ ಸುತ್ತು ನಿಧಿ ಬಿಡುಗಡೆ

639 (5397) : ಶ್ರೀ ಲಕ್ಷ್ಮಿ ನಾರಾಯಣ ಎಂ.ಡಿ. (ಅಣ್ಣಯ್ಯ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಎಷ್ಟು ಸ್ತ್ರೀಶಕ್ತಿ ಗುಂಪು ರಚನೆಯಾಗಿವೆ ತಾಲ್ಲೂಕುವಾರು ವಿವರ ನೀಡುವುದು.

ಆ) ಎಷ್ಟು ಸ್ತ್ರೀಶಕ್ತಿ ಗುಂಪುಗಳಿಗೆ ಸುತ್ತುನಿಧಿ ಬಿಡುಗಡೆ ಮಾಡಲಾಗಿದೆ?

ಇ) ಎಲ್ಲಾ ಸ್ತ್ರೀಶಕ್ತಿ ಗುಂಪುಗಳಿಗೆ ಒಂದೇ ಸಲ ಸುತ್ತುನಿಧಿ ಕೊಡದಿರಲು ಕಾರಣವೇನು?

ಈ) ಉಳಿದಿರುವ ಸ್ತ್ರೀಶಕ್ತಿ ಗುಂಪುಗಳಿಗೆ ಯಾವಾಗ ಸುತ್ತುನಿಧಿ ನೀಡಲಾಗುವುದು

ಉ) ಸುತ್ತುನಿಧಿ ಇಟ್ಟಿರುವ ಹಣವನ್ನು ಬೇರೆಕಡೆ ವರ್ಗಾಯಿಸಿದೆಯೇ; ಹಾಗಿದ್ದಲ್ಲಿ ಅದಕ್ಕೆ ಕಾರಣವೇನು? (ಪ್ರತಿಯೊಂದು ತಾಲ್ಲೂಕಿನ ವಿವರವನ್ನು ಕೊಡುವುದು)

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ತುಮಕೂರು ಜಿಲ್ಲೆಯಲ್ಲಿ 5481 ಸ್ತ್ರೀಶಕ್ತಿ ಗುಂಪುಗಳು ರಚನೆಯಾಗಿವೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:

ತಾಲ್ಲೂಕಿನ ಹೆಸರು	ಗುಂಪುಗಳ ಸಂಖ್ಯೆ
1. ತುಮಕೂರು (ಗ್ರಾ)	713
2. ತುಮಕೂರು (ನ)	54
3. ಕೊರಟಗೆರೆ	329
4. ಪಾವಗಡ	554
5. ತುರುವೇಕೆರೆ	471
6. ಶಿರಾ	571
7. ಚಿಕ್ಕನಾಯ್ಕನಹಳ್ಳಿ	627
8. ತಿಪಟೂರು	517
9. ಕುಣಿಗಲ್	358
10. ಗುಬ್ಬಿ	662
11. ಮಧುಗಿರಿ	627
ಒಟ್ಟು:	**5481**

ಆ) ರಾಜ್ಯದಲ್ಲಿ ಒಟ್ಟು 56,841 ಗುಂಪುಗಳಿಗೆ ಸುತ್ತುನಿಧಿ ಬಿಡುಗಡೆ ಮಾಡಲಾಗಿದೆ. ಅದರಲ್ಲಿ ತುಮಕೂರು ಜಿಲ್ಲೆಗೆ ಒಟ್ಟು 2671 ಗುಂಪುಗಳಿಗೆ ಸುತ್ತುನಿಧಿ ನೀಡಲಾಗಿದೆ.

ಇ) ನಬಾರ್ಡ್ ನಿಗದಿ ಪಡಿಸಿರುವ ಅರ್ಹ ಮಾನದಂಡಗಳನ್ನು ಪೂರೈಸುವಂತಹ ಗುಂಪುಗಳಿಗೆ ಹಂತ ಹಂತವಾಗಿ ಸುತ್ತುನಿಧಿಯನ್ನು ನೀಡಲಾಗುತ್ತಿದೆ.

ಈ) ಉಳಿದಿರುವ ಸ್ತ್ರೀಶಕ್ತಿ ಗುಂಪುಗಳಿಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿಯೇ ಸುತ್ತುನಿಧಿ ನೀಡಲಾಗುವುದು.

ಉ) ಇಲ್ಲ. ಉದ್ಭವಿಸುವುದಿಲ್ಲ.

ತೋಟಗಾರಿಕಾ ರೈತರ ಸಮಸ್ಯೆಗಳು ಹಾಗೂ ಮಾರುಕಟ್ಟೆ ಸೌಲಭ್ಯ

640 (5420) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೋಟಗಾರಿಕಾ ಬೆಳೆಗಳ ರೈತರು ಮಾರುಕಟ್ಟೆಗಳಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳ ವಿವರ ನೀಡುವುದು;

ಆ) ರಾಷ್ಟ್ರದಲ್ಲಿ ತೋಟಗಾರಿಕೆಯ ಬೆಳೆಗಳ ರೈತರಿಗಾಗಿ ಇರುವ ಮಾದರಿ ಮಾರುಕಟ್ಟೆಗಳ ವಿವರ ನೀಡುವುದು;

ಇ) ವಿವಿಧ ತೋಟಗಾರಿಕೆಯ ಉತ್ಪನ್ನಗಳ ರಫ್ತು ಮಾಡುವ ಅವಕಾಶ ಗಮನಿಸಿ ರಾಜ್ಯದಲ್ಲಿ ವಿದೇಶಿ ತಂತ್ರಜ್ಞಾನ ಮತ್ತು ಉಪಕರಣಗಳ ಬಳಕೆಯ ಲಾಭ ರೈತರಿಗೆ ನೀಡಲಾಗುವುದೇ;

ಈ) ರಾಜ್ಯ ಕೇಂದ್ರ ಮತ್ತು ವಿವಿಧ ಸಂಸ್ಥೆಗಳ ಉತ್ಪನ್ನಗಳ ಲಾಭ ರೈತರಿಗೆ ದೊರಕಲು ಖಾಸಗೀ ಸಹಕಾರಿ ಸಂಸ್ಥೆಗಳಿಗೆ ಇರುವ ಯೋಜನೆಗಳ ವಿವರ ನೀಡುವುದು?